೫) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯವರು ಪಾಲಿಕೆಯ ಮುಖ್ಯ ದ್ವಾರವನ್ನು ಮುಚ್ಚಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು.

SRI A. M. HINDUSGERI. —Sir, consequent to directions of authorities of Hubli-Dharwad Municipal Corporation. the main doors of the HDMC offices are closes for the public causing lot of hardship and inconveniences to the public. the decision of closure of gates has particularly caused hardship to the people coming from Dharwad and other places for attending to their legitimate work at the Corporation offices I demand a statement from the Hon 'ble Minister of Urban Development to mitigate the hardship of the people of HDMC area.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರವನ್ನು ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆ.

೬) ಮತ್ತೋಡು ಹೋಬಳಿ ಹಾಗಲಕೆರೆ ಕ್ರಾಸ್‌ನಿಂದ ಮತ್ತೋಡು ಮಾರ್ಗವಾಗಿ ಹಿರಿಯೂರು ರಸ್ತೆಯನ್ನು ರಿಪೇರಿ ಮಾಡುವುದು,

ಶ್ರೀ ಜಿ. ರಾಮದಾಸ್.— ಮಾನ್ಯ ಅಧ್ಯಕ್ಷರೇ, ಹೊಸದುರ್ಗ ಕ್ಷೇತ್ರದ ಮತ್ತೋಡು ಹೋಬಳಿಯಲ್ಲಿ ಹಾಗಲಕೆರೆ ಕ್ರಾಸ್‌ನಿಂದ ಮತ್ತೋಡು ಮಾರ್ಗವಾಗಿ ಹಿರಿಯೂರು ರಸ್ತೆಗೆ ಸೇರುವ ರಸ್ತೆಯು ಸುಮಾರು ೪—೫ ವರ್ಷಗಳಿಂದ ಕೆಟ್ಟುಹೋಗಿದೆ. ಈ ವಿಚಾರವಾಗಿ ಮೂರು ವರ್ಷಗಳಿಂದ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ನನ್ನ ಅಕ್ಕಪಕ್ಕದ ವಿಧಾನಸಭಾ ಸದಸ್ಯರೂ ಸಹ ಸರ್ಕಾರದ ಗಮನಕ್ಕೆ ತಂದಿದ್ದಾರೆ.

ಈ ಮಾರ್ಗದಲ್ಲಿ ಒಂದು ದಿನಕ್ಕೆ ನೂರಾರು ಸಿಮೆಂಟ್ ಲಾರಿಗಳು, ಲೋಕಲ್ ಬಸ್ಸುಗಳು ಮತ್ತು ಸಾರ್ವಜನಿಕರು ಸಂಚರಿಸುತ್ತಿರುವುದರಿಂದ ಈ ಮಾರ್ಗದ ರಸ್ತೆಯನ್ನು ರಿಪೇರಿ ಮಾಡಲು ಸರ್ಕಾರ ಗಮನ ಕೊಡದಿದ್ದರೆ ಖಂಡಿತವಾಗಿಯೂ ಅಪಾಯಗಳು ಮತ್ತು ಇತರೇ ಕಷ್ಟಗಳು ಒದಗಿ ಬರುತ್ತವೆ. ಸಾರ್ವಜನಿಕರು ತೊಂದರೆಗೆ ಈಡಾಗಬೇಕಾಗುತ್ತದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಜಾಗ್ರತೆ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ — ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಹ ಉತ್ತರವನ್ನು ತರಿಸಿಕೊಡುತ್ತೇನೆ.

೭ ರಾಜ್ಯದ ಹಾಲು ಉತ್ಪಾದಕರ ಸಂಘಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸೇವಾ ನಿಯಮಗಳನ್ನು ರೂಪಿಸಿ ಸೂಕ್ತ ಸಂಬಳ ಸಾರಿಗೆಗಳನ್ನು ಕೊಡಲು ಒತ್ತಾಯ.

ಶ್ರೀ ಆರ್. ವೆಂಕಟರಾಮಯ್ಯ — ಮಾನ್ಯ ಅಧ್ಯಕ್ಷರೇ, ಕರ್ನಾಟಕದಾದ್ಯಂತ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿಗಳಾಗಿ, ಗುಮಾಸ್ತೆಗಳಾಗಿ, ಟೆಸ್ಟರ್‌ಗಳಾಗಿ, ಅಟೆಂಡರ್‌ಗಳಾಗಿ ಹಲವಾರು ವರ್ಷಗಳಿಂದ ಸೊಸೈಟಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹಲವಾರು ಕಾರ್ಯದರ್ಶಿಗಳು ಪದವೀಧರರಾಗಿದ್ದಾರೆ. ಗುಮಾಸ್ತರು ಎಸ್.ಎಸ್.ಎಲ್.ಸಿ. ಓದಿದ್ದು ಟೆಸ್ಟರ್‌ಗಳು ಮತ್ತು ಅಟೆಂಡರ್‌ಗಳಾಗಿರುವವರು ಸಹ ವಿದ್ಯಾವಂತರಾಗಿದ್ದಾರೆ. ಆದರೆ ಕಾರ್ಯದರ್ಶಿಗಳ ವೇತನ ಪ್ರಾಮಾಯಾನ ೧೫೦ ರಿಂದ ೪೦೦ ರೂಗಳಿದ್ದರೆ. ಗುಮಾಸ್ತೆ ಸಂಬಳ ಪ್ರಾಮೆಯಾನ ೧೨೫ ರಿಂದ ೩೦೦ ರೂ.ಗಳು ಟೆಸ್ಟರ್‌ಗಳಿಗೆ ೧೦೦ ರಿಂದ ೩೦೦ ರೂ.ಗಳನ್ನು ಅಟೆಂಡರ್‌ಗಳಿಗೆ ೧೦೦ ರಿಂದ ೨೨೦ ರೂ.ಗಳನ್ನು ಕೊಡುತ್ತಾರೆ. ಅವರ ಕೆಲಸ ಇನ್ನೂ ಖಾಯಂ ಆಗಿಲ್ಲ. ಹತ್ತಾರು ವರ್ಷಗಳ ಕಾಲ ಕೆಲಸ ಮಾಡಿದರೂ

ಅವರಿಗೆ ಖಾಯಂ ಇಲ್ಲ, ಭಡ್ತಿ ಇಲ್ಲ, ಈ ಅನ್ಯಾಯವನ್ನು ಸರಿಪಡಿಸಬೇಕೆಂದು, ಅವರಿಗೆ ನ್ಯಾಯವಾದ ಸಂಬಳ, ಸೇವಾ ನಿಯಮಾಗಳನ್ನು ಕೊಟ್ಟು ಜಿಲ್ಲಾ ಯೂನಿಯನ್ ಮಟ್ಟದಲ್ಲಿ ಭಡ್ತಿ ಮತ್ತು ಸೇವೆ ಖಾಯಂ ಮಾಡುವಂತಹ ಸೇವಾ ನಿಯಮಾವಳಿಗಳನ್ನು ಅವರಿಗೆ ಅನ್ವಯಿಸಬೇಕೆಂದು ಅವರು ಸಂಘಗಳನ್ನು ಮಾಡಿಕೊಂಡು ಸರ್ಕಾರದಲ್ಲಿ ಮತ್ತು ಯೂನಿಯನ್‌ಗಳಲ್ಲಿ ಹೋರಾಟ ಮಾಡುತ್ತಿದ್ದರೂ ಇನ್ನೂ ಪ್ರತಿಫಲ ಇಲ್ಲವಾಗಿ ಅವರು ಹೋರಾಟಕ್ಕೆ ಇಳಿಯುವ ಸಂಭವವಿದೆ. ಇದನ್ನು ತಪ್ಪಿಸಲು ಅವರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಲಿ ಕನಿಷ್ಠ ವೇತನ, ಕೆಲಸಕ್ಕೆ ತಕ್ಕ ಸಂಬಳ, ಕೆಲಸ ಖಾಯಂ ಮಾಡುವುದು. ಸೇವಾ ನಿಯಮಗಳನ್ನು ಅನ್ವಯ ಮಾಡುವುದು ಮತ್ತು ಇತರ ಸಹಕಾರ ಸಂಘಗಳಂತೆ ಸರ್ಕಾರದ ಅಧಿಕಾರಿಗಳಂತೆ ಸೇವಾ ನಿಯಮಗಳನ್ನು ಅನ್ವಯಿಸಂವಂತೆ ಮಾಡುವುದು ನ್ಯಾಯಯುತವಾದುದು.

ಈ ಬಗ್ಗೆ ಸರ್ಕಾರ ಈ ಸೊಸೈಟಿ ನೌಕರರ ಬೇಡಿಕೆಗಳನ್ನು ಈಡೇರಿಸಲು ತಕ್ಕ ಕ್ರಮ ಕೈಗೊಂಡು ನೌಕರರ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿಗೆ ನೆರವು ನೀಡುವ ಅವಶ್ಯಕತೆ ಇರುವುದರಿಂದ ಸರ್ಕಾರ ಈ ಬಡ ನೌಕರರ ರಕ್ಷಣೆಗೆ ಬಂದು ನ್ಯಾಯಯುತ ರಕ್ಷಣೆ ಕೊಡಬೇಕೆಂದು ಈ ಮೂಲಕ ಒತ್ತಾಯಿಸಿ ಮಾನ್ಯ ಪಶುಸಂಗೋಪನಾ ಇಲಾಖಾ ಮಂತ್ರಿಗಳು ಈ ಬಗ್ಗೆ ಹೇಳಿಕೆಯನ್ನು ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಖಾತೆಯ ಸಚಿವರು).— ಮಾನ್ಯ ಅಧ್ಯಕ್ಷರೇ, ಹಾಲು ಉತ್ಪಾದಕರ ಸಹಕಾರ ಸಂಘಗಳು ಸ್ವತಂತ್ರವಾದ ಸಂಸ್ಥೆಗಳಾಗಿದ್ದು ಅವುಗಳ ಸಾಂಪತ್ತಿಕ ಸ್ಥಿತಿಗೆ ಅನುಗುಣವಾಗಿ, ಅವುಗಳ ನೌಕರರ ವೃಂದದ ಬಲ, ವೇತನ ಶ್ರೇಣಿ ಹಾಗೂ ನಿಯಮಗಳನ್ನು ರೂಪಿಸಬೇಕಾಗುತ್ತದೆ. ಏಕ ರೂಪದ ವೃಂದ, ಬಲ, ವೇತನ ಶ್ರೇಣಿ ಹಾಗೂ ನಿಯಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು ಕಷ್ಟ ಸಾಧ್ಯ.

೮ ಹಾಲುಮಂಡ್ಡಿಯನ್ನು ಕಾನೂನು ಬಾಹಿರವಾಗಿ ಸಂಗ್ರಹಿಸಿದ ಸಾಗರದ ಪ್ರಮುಖರೊಬ್ಬರ ಬಂಧನ ಹಾಗೂ ಬಿಡುಗಡೆಯ ಬಗ್ಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಅಧ್ಯಕ್ಷರೇ, ಸೆಪ್ಟೆಂಬರ್ ೧೯೮೮ರ ಕೊನೆ ಭಾಗದಲ್ಲಿ ಶಿವಮೊಗ್ಗ ಜಿಲ್ಲೆ ಸಾಗರದಲ್ಲಿ ಪರವಾನಿಗೆ ಇಲ್ಲದೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ''ಹಾಲುಮಡ್ಡಿ''ಯನ್ನು ಕಾನೂನು ಬಾಹಿರವಾಗಿ ಸಂಗ್ರಹಿಸಿದ್ದ ಸಾಗರದ ಪ್ರಮುಖರೊಬ್ಬರನ್ನ, ದಕ್ಷ ಅರಣ್ಯ ಮತ್ತು ಪೋಲೀಸ್ ಅಧಿಕಾರಿಗಳು ಬಂಧಿಸಿ ನಂತರ ಬಿಡುಗಡೆ ಮಾಡಿದ್ದು; ಇಂತಹ ಅವ್ಯವಹಾರ ಮಾಡಿದ ವ್ಯಕ್ತಿಯನ್ನು ಅಧಿಕಾರಿಗಳು ಬಂಧಿಸಿರುವುದರ ವಿರುದ್ಧ ಕೆಲವು ಪ್ರಮುಖರು ಬೆದರಿಕೆ ಒಡ್ಡಿ ಅಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಲು ಹೊರಟಿದ್ದು, ಈ ಘಟನೆ ನಡೆದಿರುವುದು ನಿಜವೇ, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇದೆಯೇ, ಕಾನೂನು ಬಾಹಿರವಾಗಿ ಅರಣ್ಯ ಸಂಪತ್ತು ಲೂಟಿ ಮಾಡಿರುವ ಇಂತಹ ವ್ಯಕ್ತಿಗಳ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ಶೀಘ್ರ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕೂಡ ಉತ್ತರವನ್ನು ತರಿಸಿಕೊಡಲಾಗುವುದು.

(ಶ್ರೀ ಕೆ. ಬಿ. ಶಾಣಪ್ಪನವರು ಗೈರು ಹಾಜರಾಗಿದ್ದಾರೆ)

೯ ಸುಳ್ಯ ತಾಲ್ಲೂಕಿನಲ್ಲಿ ನೇಮಕಗೊಂಡ ತಮಿಳು ಅಧ್ಯಾಪಕರ ಸೇವೆಯನ್ನು ಖಾಯಂಗೊಳಿಸಲು ಒತ್ತಾಯ.

ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ೧೯೭೨ರಲ್ಲಿ ನೇಮಕಾತಿಗೊಂಡ ಇಬ್ಬರು ತಮಿಳು ಅಧ್ಯಾಪಕರು ಇದ್ದು, ಇವರಿಗೆ ೧೯೭೨ರಿಂದ ಈತನಕ ಪ್ಲಾನ್ ಯೋಜನೆ (ಪ್ಲಾನ್ ಸ್ಕೀಂ)ಯಂತೆ, ಪ್ರತಿವರ್ಷ, ವರ್ಷದಲ್ಲಿ ಒಂದು ಸಲ ಮಂಜೂರಾತಿ